# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಕನಕಪುರ

## ಸಿಸಿ ನಂ.347/2015

| | | | |
|---|---|---|---|
| ಚಾಸಾ | **4** | ಪ್ರಾಸಾ | **4** |
| ಹೆಸರು | | ನಾಗರಾಜು | |
| ತಂದೆಯ ಹೆಸರು | | ಕುರ್ಲಪ್ಪ | |
| ವಯಸ್ಸು | | **64** ವರ್ಷಗಳು | |
| ಉದ್ಯೋಗ | | ಕೂಲಿ ಕೆಲಸ | |
| ವಿಳಾಸ | | ಆನೆದೊಡ್ಡಿ ಗ್ರಾಮ | |

ದಿನಾಂಕ**.23.02.2026**ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**.**

**ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ನನಗೆ ಈ ಪ್ರಕರಣದ ಆರೋಪಿ ಗೊತ್ತಿಲ್ಲ**.** ಚಾಸಾ**-1** ರಿಂದ **3, 5** ರಿಂದ **10** ರವರ ಪೈಕಿ ಚಾಸಾ**-1** ಮತ್ತು **3** ರವರು ಮಾತ್ರ ನನಗೆ ಗೊತ್ತು**.**

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಗುರುತಿಸಿರುತ್ತಾರೆ**,** ಸಾಕ್ಷಿಯು ಗುರುತಿಸಿದ ದಾಖಲೆಯು ಸ್ಥಳ ಮತ್ತು ಅಮಾನತು ಮಹಜರ್

ಆಗಿದ್ದು ಅದನ್ನು ಈಗಾಗಲೇ ನಿಪಿ-**2** ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**2**(ಸಿ) ಎಂದು ಗುರುತಿಸಲಾಯಿತು.

ಶಿವನಂಜಪ್ಪ ಎನ್ನುವವರಿಗೆ ಅಪಘಾತವಾಗಿದ್ದು, ಆ ವಿಚಾರಕ್ಕೆ ಸಂಬಂಧಿಸಿದಂತೆ ಪೊಲೀಸರು ನಿಪಿ-**2**ಕ್ಕೆ ಸ್ಥಳದಲ್ಲಿ ನನ್ನ ಸಹಿ ಪಡೆದಿರುತ್ತಾರೆ. ನಿಪಿ-**2**ಕ್ಕೆ ನಾನು ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ. ಪೊಲೀಸರು ನನ್ನ ಸಮಕ್ಷಮ ಯಾವುದೇ ಸ್ಥಳ ಪರಿಶೀಲನೆ ಮಾಡಿಲ್ಲ ಮತ್ತು ಯಾವುದೇ ಬಸ್ಸನ್ನು ಅಮಾನತ್ತುಪಡಿಸಿಕೊಂಡಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನಿ,ಪಿ.**2** ರಲ್ಲಿ ಏನು ಬರೆದಿದೆ ಎನ್ನುವುದು ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ದವಾಗಿ ಸಾಕ್ಷ್ಯ ನುಡಿದಿರುವುದರಿಂದ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರವರು ಅನುಮತಿ ಕೋರಿದ್ದು, ಅನುಮತಿಯನ್ನು ನೀಡಲಾಯಿತು.

ಪಾಟೀ ಸವಾಲು ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-

ದಿಃ**03.08.2015** ರಂದು ಘಟನಾ ಸ್ದಳಕ್ಕೆ ಪೊಲೀಸರು ಬಂದು ಚಾಸಾ-**1** ರವರು ತೋರಿಸಿದ ಸ್ದಳದಲ್ಲಿ ನನ್ನ ಹಾಗೂ ಚಾಸಾ-**1** ಮತ್ತು ಚಾಸಾ-**3** ರವರ ಸಮಕ್ಷಮ ಸ್ದಳ ಪರಿಶೀಲನೆ ಮಾಡಿ ಅಪಘಾತಪಡಿಸಿದ ಬಸ್ಸನ್ನು ನಮ್ಮ ಸಮಕ್ಷಮ ಅಮಾನತು

ಪಡಿಸಿಕೊಂಡು ಅದಕ್ಕೆ ಸಂಬಂಧಿಸಿದಂತೆ ಒಂದು ಮಹಜರ್ ನ್ನು ತಯಾರಿಸಿ ಅದರ ವಿಚಾರ ನಮಗೆ ಓದಿ ಹೇಳಿ ಸ್ದಳದಲ್ಲಿಯೇ ನಮ್ಮಗಳ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ಆರೋಪಿ ನನಗೆ ಪರಿಚಯಸ್ಥರು ಎಂದರೆ ಸರಿಯಲ್ಲ. ಆರೋಪಿ ನನಗೆ ಪರಿಚಯಸ್ಥರಾದ ಕಾರಣ ನಿಪಿ**2** ರಲ್ಲಿರುವ ಸಂಗತಿಗಳು ನನಗೆ ಗೊತ್ತಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ-

ಆರೋಪಿ ಪರ ವಕೀಲರು ತಮ್ಮ ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆಃ- ಇಲ್ಲ

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಢೀಕರಿಸುತ್ತೇನೆ.)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**